ಅಥವಾ ಕಟ್ಟುಪಾಡುಗಳ ಆಚರಣೆ ಎನಿಸಿತ್ತು. ಅಲ್ಲಿ ಬಂಧನಕ್ಕೊಳಗಾಗುವ ಸಂಕೋಲೆಯಲ್ಲಿ ಹೆಣ್ಣು ಗಂಡಿನ ಅಡಿಯಾಳಾಗಿ ಇರಬೇಕು ಎಂಬಿತ್ಯಾದಿ ಮಾತುಗಳು ಇಷ್ಟವಾಗದೆ, ಯಾರದು ಸಂಬಳ ಹೆಚ್ಚು, ಯಾರದು ಕಮ್ಮಿ, ಯಾರು ಹೆಚ್ಚು ಓದಿದ್ದಾರೆ, ಯಾರು ಕಮ್ಮಿ ಓದಿದ್ದಾರೆ ಎನ್ನುವುದಕ್ಕಿಂತಲೂ, ಇಬ್ಬರೂ ಅಲ್ಲಿ ಸಮಾನರು ಎಂದು ಗೌರವಿಸುವ ಪರಸ್ಪರ ವಿಚಾರಗಳ ಅರ್ಥೈಸುವಿಕೆ ಹೆಚ್ಚು ದಿನ ಬಾಳುವಂತಹುದು ಎಂಬ ನಂಬಿಕೆಯಲ್ಲಿ ಬದುಕಬೇಕೆಂಬ ಕನಸು ಕಟ್ಟಿದವಳು, ಹಾಗಾಗಿಯೇ ವಾಸ್ತವದ ನೆಲೆಗಟ್ಟಿನಲ್ಲಿ ಅವಳ ಯೋಚನೆಗಳಿರುತ್ತಿದ್ದವು.

***

ಭಾನುವಾರದ ಆ ದಿನ ಸಾಯಂಕಾಲದ ಸಮಯ. ಸೀಮಂತಿನಿಯ ಮನೆಯ ಎದುರು ಕೆಂಪು ಬಣ್ಣದ ಕಾರೊಂದು ಬಂದು ನಿಂತಿತು. ಅದರಿಂದ ಇಳಿದ ಒಬ್ಬ ಯುವಕ, ಅವನ ಹಿಂದೆ ಇಳಿದವರು ಆತನ ತಂದೆ–ತಾಯಿ, ಮತ್ತೊಂದು ಮಧ್ಯವಯಸ್ಸಿನ ಜೋಡಿ, ರಸ್ತೆಯ ಪಕ್ಕದಲ್ಲಿ ಕಾರು ನಿಲ್ಲಿಸಿ ಮನೆಗೆ ಬಂದರು. ಇವರ ಆಗಮನವನ್ನು ಮೊದಲೇ ನಿರೀಕ್ಷಿಸಿದ್ದ ಶಾರದೆ, ಅವರನ್ನು ದೂರದಿಂದ ಕಾಣುತ್ತಲೆ ಸ್ವಾಗತಿಸಿ ಒಳಗೆ ಕರೆದುಕೊಂಡು ಹೋದರು. ಉಭಯಕುಶಲೋಪರಿ ಆಗುತ್ತಿದ್ದಂತೆಯೇ ಲಘು ತಿಂಡಿ–ಕಾಫಿ ಪೂರೈಸಲಾಯಿತು. ಶಾರದೆಯ ಸಹಾಯಕ್ಕೆಂದು ಅವಳ ದೊಡ್ಡಮ್ಮನ ಮಗಳು ವೈಶಾಲಿ ಬಂದಿದ್ದಳು. ಅರ್ಧ ಮುಕ್ಕಾಲು ಗಂಟೆ ಮಾತುಕತೆ ಆದನಂತರ ಸೀಮಂತಿನಿಗಾಗಿ ಹುಡುಗ ಮತ್ತು ಆತನ ತಾಯಿಯ ಕಣ್ಣುಗಳು ಕಾತರದಿಂದ ಕಾದಂತಿದ್ದವು. ಆ ನಿರೀಕ್ಷೆಯ ಗಳಿಗೆಯೂ ಬಂತು...

ದೂರದಿಂದಲೆ ಇತ್ತ ಕಿವಿಯಿಟ್ಟು ಎಲ್ಲ ಘಟನೆಗಳನ್ನು ಟೀವಿಯಲ್ಲಿ ನೋಡುತ್ತಿರುವಂತೆ ರೂಮಿನಲ್ಲಿ ಕುಳಿತಿದ್ದ ಸೀಮಂತಿನಿಗೆ ಮುಂದಿನ ಭಾಗ ಇಷ್ಟವಿರಲಿಲ್ಲ... ಮುಂದೆ ನಡೆಯುವುದೆಲ್ಲವೂ ನಾಟಕ ಎನಿಸಿತು. ಅಮ್ಮನಿಗೆ ಬರ ಹೇಳಿದಳು. ಅಳುಕುತ್ತಲೇ ಒಳಗೆ ಬಂದ ಶಾರದಮ್ಮ 'ಏನೇ ನಿಂದು? ಸುಮ್ಮನೆ ಹೊರಗಡೆ ಬಂದು ಕೂರಬಾರ್ದ?' ಎಂದು ಕೊಂಚ ನಯವಾಗಿಯೇ ಕೋಪಿಸಿಕೊಂಡಳು. ಸೀಮಂತಿನಿಗೆ ತಡೆಯಲಾಗಲಿಲ್ಲ, 'ಅಮ್ಮ, ಆ ಹುಡುಗನ್ನ ಒಂದು ಹದಿನೈದು ಇಪ್ಪತ್ತು ನಿಮಿಷ ಮೇಲೆ ರೂಮಿಗೆ ಕಳಿಸು... ನಾನು ಮಾತನಾಡಬೇಕು. ನಂತರ ಉಳಿದದ್ದು. ಆ ಹುಡುಗ, ಅವರ ತಂದೆ–ತಾಯಿ ಕೋಪಿಸಿಕೊಂಡರೆ ನನಗೆ ತಿಳಿಸು...' ಎಂದು ಶಾರದೆಯ ಉತ್ತರಕ್ಕೂ ಕಾಯಲಿಲ್ಲ. 'ಏನೇ ನಿಂದು ಹುಚ್ಚಾಟ...?' ಎಂದು ಶಾರದೆಯ ಮಾತನ್ನು ತುಂಡರಿಸಿದ ಸೀಮಂತಿನಿ – 'ಪ್ಲೀಸ್ ಅಮ್ಮ, ದಯವಿಟ್ಟು ಇದೊಂದು ಮಾತು ನಡೆಸಿಕೊಡು' ಎಂದಿದ್ದಳು. ಶಾರದೆ ಧರ್ಮಸಂಕಟದ ಸೂಕ್ಷ್ಮವನ್ನರಿತು ವಾಪಸ್ ಬಂದು ಹುಡುಗನ ತಾಯಿಯ ಕಿವಿಯಲ್ಲಿ ಸುದ್ದಿ ತಿಳಿಸಿದಳು. ಹಿಂದುಮುಂದು ನೋಡದೆ ಹುಡುಗನ ತಾಯಿ ಹುಡುಗನನ್ನು ಶಾರದೆ ಹೇಳಿದಲ್ಲಿಗೆ ಕಳಿಸಿಕೊಟ್ಟರು!



***

ಸೀಮಂತಿನಿಯ ರೂಮಿನ ಹೊರಗಡೆ ಬಂದುನಿಂತ ಹುಡುಗ 'ಎಕ್ಸ್‌ಕ್ಯೂಸ್ ಮೀ... ಒಳಗೆ ಬರಬಹುದಾ...?' ಎನ್ನುತ್ತಲೇ, 'ಪ್ಲೀಸ್ ಬನ್ನಿ...' ಎಂದು ಆಹ್ವಾನಿಸಿದ ಸೀಮಂತಿನಿ ಎದುರು ಬದುರಿನ ಎರಡು ಕುರ್ಚಿಗಳಲ್ಲಿ ಕುಳಿತರು.

ಸೀಮಂತಿನಿಯನ್ನು ಆ ಹುಡುಗ ಕಣ್ಣೆತ್ತಿ ಸರಿಯಾಗಿ ನೋಡುವುದಕ್ಕೂ ಸೀಮಂತಿನಿಯ ನಯನಗಳು ಅವನನ್ನು ಸಂಧಿಸುವುದಕ್ಕೂ ಸರಿಹೋಯಿತು. 'ಸಾರಿ, ಏನು ಮೇಲೆ ಬರಹೇಳಿದಿರಂತೆ... ನನಗೆ ಗೊತ್ತು, ನನ್ನಿಂದ ನೀವು ಏನನ್ನು ನಿರೀಕ್ಷೆ ಮಾಡುತ್ತಿದ್ದೀರಿ ಎಂದು... ಹತ್ತು ನಿಮಿಷ ನನಗೆ ಸಮಯ ಕೊಡಿ...' ಎಂದು ತನ್ನ ಓದು, ನೌಕರಿ ಕುಟುಂಬದ ಸಂಕ್ಷಿಪ್ತ ಇತಿಹಾಸ... ಎಲ್ಲವನ್ನು ಸೀಮಂತಿನಿ ಕೇಳುವ ಮೊದಲೇ ತೆರೆದಿಟ್ಟ. ಅವಳಿಗೆ ಅಚ್ಚರಿ ಕಾದಿತ್ತು! ಇಲ್ಲಿಯವರೆಗೆ ಯಾವ ಹುಡುಗನೂ ತನ್ನ ವಿವರಗಳನ್ನು ಹೀಗೆ ಹೃದಯ ಬಿಚ್ಚಿ ಹೇಳಿರಲಿಲ್ಲ. ಅವಳು ಯೋಚಿಸುತ್ತಿರುವಾಗಲೆ – 'ಇನ್ನೊಂದು ಪ್ರಮುಖ ಸಂಗತಿ... ನನಗೆ ಗೊತ್ತು ಈ ವಿಷಯವನ್ನು ನನ್ನ ತಂದೆ–ತಾಯಿ ನಿಮ್ಮ ತಾಯಿಯ ಮುಂದೆ ಖಂಡಿತವಾಗಿ ಹೇಳಿರಲಿಕ್ಕಿಲ್ಲ. ನನ್ನ ತೀರ ವೈಯಕ್ತಿಕ ವಿಷಯ... ಮತ್ತು ಇದನ್ನು ನಿಮಗೆ ಹೇಳಲೇಬೇಕು ಎಂಬ ಕುತೂಹಲದಿಂದ... ಅದನ್ನು ಮುಚ್ಚಿಟ್ಟುಕೊಳ್ಳುವುದು ನನಗೆ ಅವಶ್ಯವೂ ಅಲ್ಲ, ಸಾಧುವೂ ಅಲ್ಲ...' ಎಂದು ಅಚ್ಚರಿ ಮೂಡಿಸಿದ. ಸೀಮಂತಿನಿಗೆ ನಿಜಕ್ಕೂ ಅಚ್ಚರಿ ಎನಿಸಿ, 'ಏನದು... ಹೇಳಿ...?' ಎಂದಳು.

ಹುಡುಗನ ಒಳ್ಳೆಯ ನೌಕರಿ, ಕೈತುಂಬ ಸಂಬಳದಂತಹ ವಿಷಯದ ಜೊತೆಗೆ ಮಹತ್ವದ ಅಂಶವೊಂದು ಹೊರಬೀಳುವುದರಲ್ಲಿತ್ತು. ಮತ್ತು ಆ ವಿಷಯ ತಿಳಿಯುವುದು ತಾನು ತೆಗೆದುಕೊಳ್ಳಲಿರುವ ಭವಿಷ್ಯದ ನಿರ್ಧಾರದಲ್ಲಿ ಪ್ರಮುಖ ಪಾತ್ರವಹಿಸಬಹುದೆ? ಎಂದುಕೊಂಡು ಹುಡುಗನ ಮಾತಿಗೆ ಅನುವು ಮಾಡಿಕೊಟ್ಟಳು, ಸೀಮಂತಿನಿ.

ಅವನು ಮೆಲ್ಲಗೆ, 'ನೋಡಿ, ಇಂದಿನ ಕಾಲದಲ್ಲಿ ಮದುವೆ ಎನ್ನುವುದು ಆದರ್ಶವೂ ಅಲ್ಲ, ಅನಿವಾರ್ಯವೂ ಅಲ್ಲ ಎನ್ನುವಂತಾಗಿದೆ. ಬದುಕನ್ನು ಕಟ್ಟಿಕೊಳ್ಳುವ ಒಂದು ಅವಕಾಶಗಳಾಗಿ ಇಂದು ವೈವಾಹಿಕ ಸಂಬಂಧಗಳು ಗಟ್ಟಿಯಾಗಿಲ್ಲ. ಸದ್ಯದ ಕಾಲಘಟ್ಟದಲ್ಲಿ ಅದೊಂದು ವಿವೇಚನಾ ಸಂಬಂಧದ ಬುದ್ಧಿಮಟ್ಟದಲ್ಲಿ ಯೋಚಿಸುವ ಸ್ಥಿತಿಯಲ್ಲಿದ್ದೇವೆ. ಯಾಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ, ನಾನು ಯಾವ ಆದರ್ಶಗಳಿಗೂ ಕಟ್ಟುಬಿದ್ದಿಲ್ಲ. ವಿಷಯ ಏನೆಂದರೆ, ನಾನು ವಿಧುರ... ಮದುವೆಯಾಗಿ ಆರು ತಿಂಗಳಿಗೆ ನಾನು ಇಷ್ಟಪಟ್ಟು ಮದುವೆಯಾದ ಹುಡುಗಿ ತೀರಿಹೋದಳು. ನನಗೆ ಒಳ್ಳೆಯ ನೌಕರಿ ಇದೆ, ಸಂಬಳವಿದೆ... ಆದರೆ ಸಂತಸಪಡುವ ಯೋಗವಿಲ್ಲ. ನನಗೆ ಗೊತ್ತು, ನೀವು ಈ ಸಂಬಂಧ ಒಪ್ಪಲಾರಿರಿ... ಆದರೆ ನಾನು ಮೋಸ ಮಾಡಲಾರೆ. ನನಗೆ ಒಬ್ಬ ಉತ್ತಮ ಬಾಳಸಂಗಾತಿ ಬೇಕು ನಿಜ... ಆದರೆ ಇಷ್ಟವಿಲ್ಲದವರನ್ನು ಬಲವಂತಕ್ಕೆ ಮದುವೆ ಮಾಡಿಕೊಂಡು ಅವರ ಬದುಕನ್ನು, ನನ್ನ ಬದುಕನ್ನು ನರಕವಾಗಿಸಲಾರೆ. ನನಗೆ ಸಂದರ್ಭದ ದುರ್ಲಾಭ ಪಡೆಯುವುದು ಇಷ್ಟವಿಲ್ಲ...' ಎಂದು ರಪರಪನೆ ಮಳೆ ಸುರಿದು ನಿಂತಂತೆ ಮಾತನಾಡಿ ನಿಂತುಬಿಟ್ಟ.

ಈಗ ಮೂಕಳಾಗಬೇಕಿದ್ದದ್ದು ಸೀಮಂತಿನಿಯ ಸರದಿ. ಅವಳ ಗಂಟಲು ಒಣಗಿತ್ತು. ಅವಳಿಂದ ಕೆಲ ಹೊತ್ತು ಮಾತೇ ಹೊರಡಲಿಲ್ಲ... ಮತ್ತೆ ಆ ಹುಡುಗನೆ ಎಚ್ಚರಿಸಿದ – 'ಬನ್ನಿ, ಕೆಳಗಡೆ ಹೋಗೋಣ... ಎಲ್ಲರೂ ಕಾಯುತ್ತಿರುತ್ತಾರೆ. ನನಗೆ ನಿಮ್ಮ ಬೇಕು, ಬೇಡ, ಸ್ವಭಾವಗಳನ್ನು ನಿಮ್ಮ ತಾಯಿ ಕೆಲವು ದಿನಗಳ ಹಿಂದೆಯೇ ಹೇಳಿದ್ದಾರೆ. ನಮ್ಮ ಸಂಬಂಧ ಗಟ್ಟಿಗೊಳ್ಳುವ ಕುರಿತು ಅಂತಿಮ ನಿರ್ಧಾರ ನಿಮ್ಮದು....ನಿಮ್ಮ ನಿರ್ಧಾರ ನಿಧಾನಕ್ಕೆ ಹೇಳಿ. ಟೇಕ್ ಯುವರ್ ಓನ್ ಟೈಂ...' ಎಂದು ಹುಡುಗ ಕೊನೆಯ ಮಾತಾಡಿ ಹೊರಬಂದ. ಸೀಮಂತಿನಿ ಅಮ್ಮನ ಮುಖಭಾವ ಗಮನಿಸಿದಳು.

ಶಾರದೆಯ ಕಣ್ಣಲ್ಲಿ ನೀರು ತುಂಬಿತ್ತು. ಸುಮಾರು ಒಂದೂವರೆ ಗಂಟೆ ಕಾಲ ಈ ಎಲ್ಲ ಘಟನೆಗಳು ಸಿನಿಮಾದಂತೆ ನಡೆದುಹೋದವು. ಸಂಜೆ ಬೇಗ ಕತ್ತಲಾಗಿ ಇಳೆ ತಣ್ಣಗಾಗಿತ್ತು, ಬಾನು ಮೋಡಗಟ್ಟಿ ಮಳೆ ಹನಿಸುವ ತಯಾರಿಯಲ್ಲಿತ್ತು. ಹುಡುಗ, ಅವನ ತಂದೆ–ತಾಯಿ ಎಲ್ಲರಿಗೂ ಹೇಳಿ ಹೊರಟು ನಿಂತರು. ಅವರೆಲ್ಲ ಕಾರಿನಲ್ಲಿ ವಾಪಸಾಗುತ್ತಿದ್ದಂತೆ, ಇತ್ತ ಸೀಮಂತಿನಿ ಮನೆ ಒಳಗಡೆ ಬಂದು ತನ್ನ ತಾಯಿಯನ್ನು ಬಲವಾಗಿ ಅಪ್ಪಿಕೊಂಡು, ತನ್ನ ನಿರ್ಧಾರ ಹೇಳಲು ತಾಯಿಯನ್ನು ಎದುರು ಕೂರಿಸಿಕೊಂಡಳು...

ಹೊರಗಡೆ ಬಾನು ಹರಿದು ಮಳೆ ಸುರಿಯಲಾರಂಭಿಸಿತ್ತು. ಇತ್ತ ತಾಯಿ ಮಗಳಿಬ್ಬರ ನಯನಗಳು ತೇವಗೊಂಡು ಹೃದಯಗಳು ಹಗುರಾಗಿದ್ದವು.

ಪ್ರತಿಕ್ರಿಯಿಸಿ: **feedback@sudha.co.in**